ಇಂಡಿ ತಾಲ್ಲೂಕಿನಲ್ಲಿ ಹಿಂಸಾಕೃತ್ಯಗಳು ಹೆಚ್ಚಿರುವ ಬಗ್ಗೆ

3235 - ಶ್ರೀ ಮನೋಹರ ಐನಾಪುರ (ಬಳ್ಳೊಳ್ಳಿ): ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಿಜಾಪುರ ಜಿಲ್ಲೆಯ ಇಂಡಿ ತಾಲ್ಲೂಕಿನಲ್ಲಿ ಹೆಚ್ಚಿನ ಜನಸಂಖ್ಯೆಯ ಹಿಂಸಾಕೃತ್ಯಗಳು ದಾಖಲಿ ಆಗಿರುವುದು ಸರ್ಕಾರಕ್ಕೆ ತಿಳಿದಿದೆಯೇ?

ಆ) ಹಾಗಿದ್ದಲ್ಲಿ, ನ್ಯಾಷನಲ್ ಹೆದ್ದಾರಿಯ ಜಲಕಿ ಕ್ರಾಸ್ ಬಳಿ ಹೆಚ್ಚಿನ ಒಂದು ಪೋಲೀಸ್ ಠಾಣೆ ತೆರೆಯುವ ವಿಷಯವನ್ನು ಸರ್ಕಾರ ಪರಿಗಣಿಸುವುದೇ?

ಇ) ಕೆಲವಾರು ಪೋಲೀಸ್ ಠಾಣೆಗಳಲ್ಲಿ ಪೋಲೀಸ್ ಪೇದೆಗಳ ಕೊರತೆ ಇರುವುದು ಸರ್ಕಾರಕ್ಕೆ ತಿಳಿದಿದೆಯೇ? ಹಾಗಿದ್ದಲ್ಲಿ ಅವರನ್ನು ಯಾವಾಗ ತುಂಬಲಾಗುವುದು?

ಶ್ರೀ ಧರ್ಮಸಿಂಗ್ (ಗೃಹ ಮತ್ತು ಅಬಕಾರಿ ಸಚಿವರು):

ಅ) ಹೌದು.

ಆ) ಇಲ್ಲ.

ಇ) ಹೌದು, ಹಂತಹಂತವಾಗಿ ಪೋಲೀಸ್ ಸಿಬ್ಬಂದಿಯನ್ನು ಹೆಚ್ಚಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆ. 1991-92ರಲ್ಲಿ 1000 ಜನ ಪೋಲೀಸ್ ಸಿಬ್ಬಂದಿ ಹೆಚ್ಚಿಸುವ ಪ್ರಸ್ತಾವನೆ ಪರಿಶೀಲನೆಯಲ್ಲಿದೆ.

ಶ್ರೀ ಮನೋಹರ ಐನಾಪುರ : ಅಧ್ಯಕ್ಷರೇ, ಬಿಜಾಪುರ ಜಿಲ್ಲೆಯನ್ನು ಯಾವಾಗಲೂ ಕಡೆಗಣಿಸುತ್ತಾ ಬಂದಿದ್ದಾರೆ, ಏಕೆಂದು ಗೊತ್ತಾಗುತ್ತಾ ಇಲ್ಲ. ಬಿಜಾಪುರ ಜಿಲ್ಲೆಯ ಇಂಡಿ ತಾಲ್ಲೂಕಿನಲ್ಲಿ ಹೆಚ್ಚಿನ ಹಿಂಸಾಕೃತ್ಯಗಳು ದಾಖಲಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ನಾನು ಕೇಳಿದ್ದಕ್ಕೆ 'ಹೌದು' ಎಂದಿದ್ದಾರೆ. ಆದರೆ ಅದಕ್ಕೆ ಪರಿಹಾರ ಕಂಡುಹಿಡಿಯುತ್ತಿಲ್ಲ. ಇಂಡಿ ತಾಲ್ಲೂಕಿನಲ್ಲಿ ಯಾವ ತರಹ ಕೊಲೆಗಳು ಆಗುತ್ತಾ ಇವೆ ಅದು ಇಡೀ ನಮ್ಮ ರಾಜ್ಯದಲ್ಲೇ ಎಲ್ಲಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿದೆ. ಮೊನ್ನೆ ನಮ್ಮ ಪಕ್ಕದ ಹೆರನಾಳಾಳು ಗ್ರಾಮದಲ್ಲಿ ಒಂದು ಕೊಲೆ ಆಯಿತು. ಆಗ ಅಲ್ಲಿ ಎಸ್‌ಐ ಇರಲಿಲ್ಲ, ಪಿಸಿಗಳು ಇರಲಿಲ್ಲ. ಹೀಗೆ ಸುಮಾರು ಕೊಲೆಗಳು ಹಿಂಸಾಕೃತ್ಯಗಳು ನಡೆಯುತ್ತಿದೆ. ಆದರೂ ಅಲ್ಲಿ ಒಂದು ಪೋಲೀಸ್ ಠಾಣೆ ಇಲ್ಲ. ನ್ಯಾಷನಲ್ ಹೈವೇನಲ್ಲಿ ಜಲಕಿಕ್ರಾಸ್ ಇದೆ. ಮತ್ತೆ ಇಲ್ಲಿ ಸಾವಿರಾರು ಲಾರಿಗಳು ಬಸ್‌ಗಳು ಓಡಾಡುತ್ತಿವೆ, ಅಲ್ಲಿಂದ ಮಹಾರಾಷ್ಟ್ರಕ್ಕೆ ಎರಡು ಕಡೆಯಿಂದ ಪಂಢರಪುರ ಮತ್ತು ಸೊಲ್ಲಾಪುರಕ್ಕೆ ಸಾಕಷ್ಟು ಟ್ರಾನ್ಸ್‌ಪೋರ್ಟೇಷನ್ ಇದೆ. ಅಲ್ಲಿ ಆರ್‌ಟಿಓ ಮತ್ತು ಸೇಲ್ಸ್‌ಟ್ಯಾಕ್ಸ್ ಚೆಕ್‌ಪೋಸ್ಟ್ ಇವೆ. ಹೀಗಾಗಿ ಅಲ್ಲಿ ಜಲಕಿ ಕ್ರಾಸ್‌ನಲ್ಲಿ ಒಂದು ಪೋಲೀಸ್ ಠಾಣೆಯ ಅವಶ್ಯಕತೆ ಬಹಳ ಇದೆ. ಅವರೇನಾದರೂ ಕಂಪ್ಲೇಂಟ್ ಕೊಡಬೇಕಾದರೆ ಸುಮಾರು 30 ರಿಂದ 40 ಕಿ.ಮೀ. ದೂರ ಹೋಗಬೇಕಾಗುತ್ತದೆ. ಅದಕ್ಕಾಗಿ ಸಚಿವರು ಈ ಪೋಲೀಸ್ ಠಾಣೆಯನ್ನು ನಿರ್ದಿಷ್ಟವಾಗಿ ಯಾವಾಗ ಸ್ಥಾಪಿಸಲಿಚ್ಛಿಸುತ್ತಾರೆ ಎಂದು ಹೇಳಬೇಕೆಂದು ಕೇಳುತ್ತಾ ಇದ್ದೇನೆ.

ಶ್ರೀ ಧರ್ಮಸಿಂಗ್: ಮಾನ್ಯ ಸದಸ್ಯರು ಆ ಜಲಕಿ ಗ್ರಾಮದಲ್ಲಿ ಬಹಳಷ್ಟು ದರೋಡೆ, ಕೊಲೆಗಳು ಆಗುತ್ತಾ ಇವೆ, ಅಲ್ಲಿ ಪೋಲೀಸ್ ಠಾಣೆ ಮಾಡಬೇಕೆಂದು ಹೇಳಿದ್ದಾರೆ. ನಮ್ಮ ಮಾಹಿತಿ ಪ್ರಕಾರ ಅಲ್ಲಿಲ್ಲ ಎಂದು ಹೇಳಿದ್ದೇನೆ. ಆದರೂ 1990-91ರಲ್ಲಿ ಆ ಪೋಲಿಸ್ ಠಾಣೆ ಮಾಡುವುದನ್ನು ನಾನು ಪರಿಶೀಲನೆ ಮಾಡುತ್ತೇನೆ.

ಶ್ರೀ ಮನೋಹರ ಐನಾಪುರ: ಇನ್ನೊಂದು ಉಪಪ್ರಶ್ನೆಗೆ ಸಚಿವರು ಪೋಲೀಸ್ ಸಿಬ್ಬಂದಿಯನ್ನು ಆದಷ್ಟು ಬೇಗನೆ ಹೆಚ್ಚಿಸುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ

ಎಂದು ಹೇಳಿದ್ದಾರೆ. ಒಂದು ಪೋಲೀಸ್ ಠಾಣೆಯಲ್ಲಿ ಒಬ್ಬ ಎಸ್‌ಐ ಮತ್ತು ಮೂರು ಅಥವಾ ನಾಲ್ಕು ಕಾನ್‌ಸ್ಟೇಬಲ್‌ಗಳಿರುತ್ತಾರೆ. ಅದರಲ್ಲಿ ಒಂದಿಬ್ಬರು ರಜೆ ಮೇಲೆ ಹೋದರೆ ಏನಾದರೂ ಕಂಪ್ಲೇಂಟ್ ಬಂದರೆ ಅದನ್ನು ಆಲಿಸುವವರು ಯಾರೂ ಇರುವುದಿಲ್ಲ. ಅದಕ್ಕಾಗಿ ಸಚಿವರು ಈ ಸಿಬ್ಬಂದಿಯನ್ನು ಎಷ್ಟು ತಿಂಗಳೊಳಗೆ ನೇಮಕ ಮಾಡಲು ಸಾಧ್ಯ ಎಂದು ಹೇಳಬೇಕೆಂದು ಕೇಳುತ್ತೇನೆ.

ಶ್ರೀ ಧರ್ಮಸಿಂಗ್ : 1991-92ನೇ ಸಾಲಿನಲ್ಲಿ ಸಾವಿರ ಕಾನ್‌ಸ್ಟೇಬಲ್‌ಗಳನ್ನು ಭರ್ತಿ ಮಾಡಲು ಸರ್ಕಾರ ಈಗಾಗಲೇ ಆಜ್ಞೆ ಹೊರಡಿಸಿದೆ ಮತ್ತು ರೆಕ್ರೂಟ್‌ಮೆಂಟ್ ನಡೀತಿದೆ.

ಅಧ್ಯಕ್ಷರು : ಪ್ರಶ್ನೋತ್ತರ ಕಾಲ ಮುಗಿಯಿತು. ಈ ಚುಕ್ಕೆಗುರುತಿಲ್ಲದ ಪ್ರಶ್ನೆಗಳು.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.

ಶ್ರೀ ಜಿ.ಪುಟ್ಟಸ್ವಾಮಿ ಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು): ಮಾನ್ಯ ಅಧ್ಯಕ್ಷರೆ, 17-9-91ರ ಲಿಖಿತ ಮೂಲಕ ಉತ್ತರಿಸುವ 30ನೇ ಪಟ್ಟಿಯಲ್ಲಿರುವ 100 ಪ್ರಶ್ನೆಗಳ ಪೈಕಿ 42 ಚುಕ್ಕೆ ಗುರುತಿಲ್ಲದ ಪ್ರಶ್ನೆಗಳ ಉತ್ತರಗಳನ್ನು ಸಭೆಯ ಮುಂದಿಡುತ್ತಿದ್ದೇನೆ.

ನಗರ ಆಸ್ತಿ ಮಿತಿ ಕಾಯಿದೆ

3177-ಶ್ರೀ ಸಿ. ಬೈರೇಗೌಡ (ವೇಮಗಲ್): ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1989 ನವೆಂಬರ್‌ನಿಂದೀಚೆಗೆ ಸರ್ಕಾರವು ನಗರಾಸ್ತಿಮಿತಿ ಕಾಯ್ದೆಯಡಿಯಲ್ಲಿ ವಿನಾಯಿತಿ ನೀಡಿರುವ ಪ್ರಕರಣಗಳೆಷ್ಟು? ಹಾಗೂ ಅವುಗಳಾವುವು? (ವಿನಾಯಿತಿ ನೀಡಿದ ಅವಧಿ ಸಮೇತ ವಿನಾಯಿತಿ ನೀಡಲಾಗಿರುವ ಭೂ ವಿಸ್ತೀರ್ಣ ಹಾಗೂ ಭೂಮಾಲೀಕರ ಹೆಸರುಗಳ ವಿವರವನ್ನು ನೀಡುವುದು)

ಆ) 1990 ನವೆಂಬರ್‌ನಿಂದೀಚೆಗೆ ನಗರಾಸ್ತಿಮಿತಿ ವಿನಾಯಿತಿ ಕಾಯ್ದೆಯನ್ವಯ ವಿನಾಯಿತಿ ಕೋರಿ ಸರ್ಕಾರಕ್ಕೆ ಬಂದಿರುವ ಅರ್ಜಿಗಳೆಷ್ಟು? ಅವು ಯಾವುವು?

ಇ) ಅವುಗಳ ಪೈಕಿ ಸರ್ಕಾರ ಎಷ್ಟಕ್ಕೆ ವಿನಾಯಿತಿ ನೀಡಿದೆ? ಅವು ಯಾವುವು?

ಈ) ಸರ್ಕಾರವು ತಿರಸ್ಕರಿಸಲಾದ ಅರ್ಜಿಗಳೆಷ್ಟು? ಅವು ಯಾವುವು?

ಶ್ರೀ ಕೆ.ಜೆ.ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು):

ಅ) ಒಟ್ಟು 255 ಪ್ರಕರಣಗಳಿಗೆ ಸರ್ಕಾರ ವಿನಾಯಿತಿ ನೀಡಿದೆ (ಭೂ ಮಾಲೀಕರ ಹೆಸರು ಇತ್ಯಾದಿಗಳನ್ನು ಅನುಬಂಧ-1ರಲ್ಲಿ ಒದಗಿಸಿದೆ).

ಆ) ಒಟ್ಟು 318 ಅರ್ಜಿಗಳು ಬಂದಿರುತ್ತದೆ (ವಿವರಗಳನ್ನು ಅನುಬಂಧ-2ರಲ್ಲಿ ಒದಗಿಸಿದೆ)

ಇ) ಒಟ್ಟು 35 ಪ್ರಕರಣಗಳಿಗೆ ಸರ್ಕಾರ ವಿನಾಯಿತಿ ನೀಡಿದೆ.(ವಿವರಗಳನ್ನು ಅನುಬಂಧ-3ರಲ್ಲಿ ಒದಗಿಸಿದೆ)

ಈ) 4 ಪ್ರಕರಣಗಳನ್ನು ಸರ್ಕಾರ ತಿರಸ್ಕರಿಸಿದೆ (ವಿವರಗಳನ್ನು ಅನುಬಂಧ-4ರಲ್ಲಿ ಒದಗಿಸಿದೆ).